ವಿದ್ಯಾ ಎನ್ ಪೈ, ಕಾಸರಕೋಡ

◆ ದೇವರಿಗೆ ಎಲ್ಲರೂ ಸಮಾನರು ಅಂತಾರೆ. ಆದರೆ ಒಬ್ಬರಿಗೆ ಸುಖ, ಇನ್ನೊಬ್ಬರಿಗೆ ದುಃಖ ಏಕೆ?



ಬೆಳದಿಂಗಳು ಒಂದೇ; ಅದರಿಂದ ಕವಿಗೆ ತಂಪು, ವಿರಹಿಗೆ ತಾಪ! ತೃಪ್ತಿಯೇ ಕೊಳ; ಅತೃಪ್ತಿಯೇ ಕೊಳಕು.

ಕೆ.ವಿ. ಗೋವಿಂದಾಚಾರಿ, ಮೈಸೂರು

◆ ಶಿವನಿಗೆ ಕೈಲಾಸ; ವಿಷ್ಣುವಿಗೆ ವೈಕುಂಠ. ಬ್ರಹ್ಮನಿಗೆ?

'ನಮ್ದೇ ಲೋಕ ಸೃಷ್ಟಿಸ್ಕೋಬೇಕು ಈ ಲೋಕಾನೇ ಮರ್‍ತು' ಎಂದರು ರಾಜರತ್ನಂ. ಬ್ರಹ್ಮನದು ಅವನದೇ ಆದ ಬ್ರಹ್ಮಲೋಕ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಮಂತ್ರಿಗಳು ಒಂದು ತಿಂಗಳು ಮೌನವ್ರತ ಆಚರಿಸಿದರೆ.....?

ಯಾವುದೋ ದೊಡ್ಡ ಹಗರಣದಲ್ಲಿ ಸಿಲುಕಿದ್ದಾರೆಂಬುದು ಖಚಿತ.

ತುರಗಲ್ಲ ಉಮೇಶ, ಚಿತ್ರದುರ್ಗ

◆ ಅದೇ ಗಾಳಿ, ಅದೇ ಭೂಮಿ, ಅದೇ ಸೂರ್ಯ, ಅದೇ ಚಂದ್ರ. ಕೆಟ್ಟವರು ಯಾರು? ನಾವಾ ಅಥವ ನೀವಾ?



ಈ ವಿಷಯದಲ್ಲಿ ಪ್ರಪಂಚದ ಎಲ್ಲರದೂ ಒಂದೇ ಅಭಿಪ್ರಾಯ ನಾವಲ್ಲ, ನೀವೇ!

ಮಹಾವೀರ ಕಾಸರ, ಶಿವಮೊಗ್ಗ

◆ ಎಲ್ಲರೂ ಸುಂದರ ಹುಡುಗಿಯರನ್ನು ಬಯಸಿದರೆ ಸಾಮಾನ್ಯ, ಕುರೂಪಿ ಹುಡುಗಿಯರ ಗತಿ ಏನು?

ಏನೇನೂ ತೊಂದರೆಯಿಲ್ಲ. ಬಯಸುವುದೇ ಬೇರೆ, ದೊರಕುವುದೇ ಬೇರೆಯಲ್ಲವೆ!

ಶಿ. ರವೀಂದ್ರನಾಥ, ಬೀಳಗಿ

◆ ಅರಮನೆಗೂ, ಗುರುಮನೆಗೂ ಇರುವ ವ್ಯತ್ಯಾಸವೇನು?

ಗುರುಮನೆ ಪಾಂಡಿತ್ಯಕ್ಕೆ ಒರೆಗಲ್ಲು, ಅರಮನೆ ಷೋಕೇಸ್.

ಅಮರಯ್ಯಾ ಪತ್ರಿಮಠ, ಸುರಪೂರ

◆ ಸಮ್ಮಿಶ್ರ ಸರ್ಕಾರಕ್ಕೂ, ಸಮ್ಮಿಶ್ರ ತಳಿಗೂ ವ್ಯತ್ಯಾಸವೇನು?

ಸಮ್ಮಿಶ್ರ ತಳಿಯಲ್ಲಿ ಆರೋಗ್ಯಕರ ಅಂಶಗಳೂ ಇರುತ್ತವೆ.

ಎಂ.ಎ. ಕುಮಾರ್, ಬೆಂಗಳೂರು

◆ ಚೆನ್ನಾಗಿ ದುಡ್ಡು ಮಾಡಬೇಕಾದರೆ ಹೆಚ್ಚಾಗಿ ಓದಿರಬೇಕಾ ರಾಮ್?

ನಾಯಕನ ಮೊಮ್ಮಗನಾಗಿದ್ದರೂ ಸಾಕೆನ್ನಲು 18 ವರ್ಷಕ್ಕೇ 20 ಕೋಟಿ ಆಸ್ತಿ ತೋರಿಸಿದ್ದೇ ಸಾಕ್ಷಿ.

ಆರ್. ಮಧುಸೂದನ್, ಹಾಸನ

◆ ಕುಡಿದು ಡ್ರೈವ್ ಮಾಡಿದರೆ ದಂಡ ಹಾಕ್ತಾರೆ. ಕುಡಿದು ನಡೆದಾಡಿದರೆ ದಂಡ ಇಲ್ಲ. ಯಾಕೆ?

ಹಿಡಿಯುವಷ್ಟರಲ್ಲಿ ಅವನೇ ಉದ್ದಂಡ ಹಾಕಿರುತ್ತಾನಲ್ಲ! ನಮ್ಮ ಸಿಸ್ಟಮ್‌ನಲ್ಲಿ ಎದ್ದವರಿಗೆ ಫೀ, ಬಿದ್ದವರಿಗೆ ಮಾಫಿ!

ಕುಮಾರ ಚಲವಾದಿ, ಹಾಸನ

◆ ಭಾಷಣ ಹೇಗಿರಬೇಕು?

ಹೋಟೆಲ್ ಮಾಣಿ ಒಪ್ಪಿಸುವ ತಿಂಡಿಪಟ್ಟಿಯಂತೆ ಸ್ಪಷ್ಟ, ಹ್ರಸ್ವ, ಕುತೂಹಲಕರ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

◆ ಪೋಸ್ಟ್ ಬಾಕ್ಸ್‌ಗೂ, ವೇಸ್ಟ್ ಬಾಕ್ಸ್‌ಗೂ ಇರುವ ವ್ಯತ್ಯಾಸವೇನು?

ಅಲ್ಲಿ ಬರೆದಿರುವ ಹಾಳೆ; ಇಲ್ಲಿ ತೊರೆದಿರುವ ಹಾಳೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಮದುವೆ ಮತ್ತು ಮರಣಗಳಲ್ಲಿ ಅಂತರವೇನು ಸಾರ್?

ಬೊಂಬಿನದೇ ನಿಲ್ಲಿಸಿ ಕಟ್ಟಿದರೆ ಮದುವೆ; ಮಲಗಿಸಿ ಕಟ್ಟಿದರೆ ಮರಣ.

ಫಾಲನೇತ್ರ ಸಜ್ಜನ, ಶಿರಸಿ

◆ ಆತ್ಮವನ್ನು ಯಾವುದಕ್ಕೆ ಹೋಲಿಸಬಹುದು?

ಇಂದು ಈ ಮನೆ, ನಾಳೆ ಇನ್ನೊಂದು ಮನೆಗೆ ಹೋಗುವ ಬಾಡಿಗೆದಾರನಿಗೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ, ಬೆಂಗಳೂರು

◆ ಹೆಂಡತಿಯ ಹತ್ತಿರವೇ ಸಾಲ ಮಾಡುವವನನ್ನು ಏನೆಂದು ಕರೆಯಬಹುದು?

ಬಡ್ಡಿಗಂಡ.

ರವಿಕಾಂತ ಎಂ.ಕೆ., ತುಮಕೂರು

◆ ಕಾಡಿನಲ್ಲಿ ಆನೆ, ನಾಡಿನಲ್ಲಿ ಕುರಿಯಂತೆ ಮನುಷ್ಯರೂ ಹಿಂಡುಹಿಂಡಾಗಿ ಏಕೆ ಇರುವುದಿಲ್ಲ?

ಇರುತ್ತಾರಲ್ಲ... ಹಿಂಡುವವರು ಕೆಲವರು, ಹಿಂಡಿ ಆಗಿರುವವರು ಕೆಲವರು ಸೇರಿ ಹಿಂಡುಹಿಂಡಾಗಿರುತ್ತಾರೆ.

ಮುರಲೀಧರ ಕುಲಕರ್ಣಿ, ಬೀದರ್

◆ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದಿದ್ದಾರೆ ದಾಸರು. ಆದರೆ ಗುರುವೇ ಸರಿಯಿರದಿದ್ದರೆ?

ಏಕಲವ್ಯನಂತೆ ಡಿಸ್ಟೆನ್ಸ್ ಎಜುಕೇಷನ್ ಪಡೆದು ಶ್ರೇಷ್ಠರಾಗಿ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

◆ ಸಮಯಸಾಧಕರನ್ನು ಏನೆಂದು ಕರೆಯಬೇಕು?



ಅವರನ್ನೇಕೆ ಕರೆಯಬೇಕು? ಸಮಯ ಒದಗಿಬಂದಾಗ ಅವರೇ ಬರುತ್ತಾರೆ.

ಡಿ.ಎಸ್. ಪಂಕಜ ಸುಬ್ರಹ್ಮಣ್ಯ, ಬೆಂಗಳೂರು

◆ ಕಕ್ಷಿಯು ಅಪರಾಧಿಯೆಂದು ತಿಳಿದಿದ್ದರೂ ಅವರ ಪರವಾಗಿ ವಾದಿಸುವ ನ್ಯಾಯವಾದಿಗಳಿಗೆ ಆತ್ಮಸಾಕ್ಷಿ ಇರುವುದಿಲ್ಲವೆ?

50% ಇರುತ್ತದೆ; ಆತ್ಮ ಇರಲಿ, ಬಿಡಲಿ, ಸಾಕ್ಷಿ ಇದ್ದೇ ಇರುತ್ತದಲ್ಲ.

■ ರಾಮ್